ಅಡ್ಡಾಡತೊಡಗಿದರೋ ಆಗ ಕೆಂಪು, ಬಿಳಿ, ನೀಲಿ ಟೂಥ್‌ಪೇಸ್ಟ್‌ಗಳಲ್ಲದೆ ಮುಖಕ್ಕೆ ಹಚ್ಚುವ ಫೇರ್ ಆಂಡ್ ಲವಲೀ, ಡೋವ್ ಸ್ನೋ, ಪಾಂಡ್ಸ್ ಪೌಡರ್ ಡಬ್ಬಿಗಳು ಕೆಲವು ಹುಡುಗ–ಹುಡುಗಿಯರ ಮನೆಯ ಗುಪ್ತ ಮಾಡುಗಳಲ್ಲಿ ಕಾಣತೊಡಗಿದವು. ಇದ್ದಿಲು, ಬೇವಿನಕಡ್ಡಿ, ಉಪ್ಪು ಮುಂತಾದ ಕಾಲಾನುಕಾಲದ ಕ್ರಮಗಳಿಗೆ ಹೆಚ್ಚು ಒಗ್ಗಿಕೊಂಡಿದ್ದ ಅವರು ನಗರದ ಹುಡುಗರಂತೆ ಈ ದಿಸೆಯಲ್ಲಿ ಇಷ್ಟೊಂದು ಬದಲಾವಣೆ ಸಾಧಿಸಲು ನೆರವಾದ ಪುಂಡಲೀಕನಿಗೆ ಬಹುತೇಕ ಸಹಪಾಠಿಗಳು ಕೃತಜ್ಞರಾಗಿದ್ದರು.

ಬಯಲಕಡೆ ಹೋಗುವ ಹೆಂಗಸರನ್ನು ಆತ ಹಿಂಬಾಲಿಸುತ್ತಾನೆಂಬುದು ಪುಂಡಲೀಕನ ಬಗ್ಗೆ ಇರುವ ಇನ್ನೊಂದು ಬಹುದೊಡ್ಡ ಆಪಾದನೆಯಾಗಿತ್ತು. ಅದರ ಸಲುವಾಗಿ ಆತ ಅನೇಕ ಸಲ ಬಡಿಸಿಕೊಂಡಿದ್ದ. ಹುಡುಗ, ಇಂದಲ್ಲ ನಾಳೆ ಸುಧಾರಿಸುತ್ತಾನೆ ಎಂದೇ ಎಲ್ಲರೂ ಅವನನ್ನು ಕ್ಷಮಿಸುತ್ತ ಬಂದರು. ಅವನು ಶತದಡ್ಡನೆಂದೂ ಎದೆ ಸೀಳಿದರೆ ನಾಲ್ಕು ಅಕ್ಷರ ಇಲ್ಲವೆಂದೂ ಎಲ್ಲರಿಗೂ ಗೊತ್ತಿತ್ತು. ಅವನು ದಡ್ಡನಿದ್ದರೆ ಇರಲಿ, ಆದರೆ ಕ್ರಿಮಿನಲ್ ಅಪರಾಧ ಮಾಡುತ್ತಿದ್ದಾನೆ ಎಂದು ಮಾಸ್ತರರು ಅವನ ಅಪ್ಪ–ಅವ್ವನಿಗೆ, ಅಕ್ಕಪಕ್ಕದವರಿಗೆ ಹೇಳಿಹೋದರು. ‘ಇಂಥದನ್ನೆಲ್ಲ ಪೋಲಿಸ್ ಸ್ಟೇಷನ್ನಿಗೆ ಒಯ್ದರ ನಿಮ್ಮ ಹುಡುಗ ಮನಿಗೆ ಹೊಳ್ಳಿ ಬರಂಗಿಲ್ಲ, ತಿಳಕೊಳ್ರಿ. ಅದಲ್ಲದ ಊರಿಗೂ ಕೆಟ್ಟ ಹೆಸರು, ಸಾಲಿಗೂ ಕೆಟ್ಟ ಹೆಸರು. ನೌಕರಿ ಸಲುವಾಗಿ ನಾವು ಒಂದು ಊರಿಂದ ಮತ್ತೊಂದು ಊರಿಗೆ ಬಂದಿರತೇವಿ. ಅಂತಹದ್ರಾಗ ಬರೇ ಇದೇ ಉಸಾಬರಿ ಮಾಡ್ಕೊಂಡು ಕುಂಡ್ರೋಣೇನು? ಇಂದೋ, ನಾಳೆಯೋ ನಾವು ವರ್ಗ ಮಾಡಿಸ್ಕೊಂಡು ನಮ್ಮ ಬೆಳಗಾಂವ–ಧಾರವಾಡ ಕಡೆ ಹೋಗಾವ್ರು ಅದೇವ... ಅಂಥಾದ್ರಾಗ ಇಂವದೊಂದು ಕೆಟ್ಟ ರಿಮಾರ್ಕ್ ಬಿದ್ರ ನಾವು ಸಾಯೋತನಕ ಇಂವನ ಜೋಡಿ ಇದೇ ಊರಾಗ ಇರಬೇಕಾಗತೇತಿ...’ ಹೆಡ್‌ಮಾಸ್ತರ್ ಕೆಂಡಾಮಂಡಲವಾಗಿದ್ದರು. ಹೋದ ವರ್ಷವಷ್ಟೆ ಅವರನ್ನು ಬೆಳಗಾವಿಯಿಂದ ಇಲ್ಲಿಗೆ ಶಾಲೆಯ ಫಲಿತಾಂಶ ಸುಧಾರಿಸಲೆಂದು ವರ್ಗ ಮಾಡಲಾಗಿತ್ತು. ‘ಸಾಲಿ ಫಲಿತಾಂಶ ಹಾಳಾಗಿ ಹೋಗಲಿ, ಇಲ್ಲಿ ಪರಿಸ್ಥಿತಿ ನೋಡಿದ್ರ ನನ್ನ ಜೀವನದ ಫಲಿತಾಂಶನss ಅದಲು–ಬದಲು ಆಗಲಿಕ್ಕೆ ಹತ್ತೇದ...’ ಪುಂಡನ ಮನೆಯಿಂದ ಕದಲುವ ತನಕ ಅವರು ಅವನನ್ನು ಶಪಿಸಿದ್ದೇ ಶಪಿಸಿದ್ದು.

ಹೆಂಗಸರು ತುಂಬಿದ ತಂಬಿಗೆ ಹಿಡಿದು ಹೊರಗೆ ಹೋಗಬೇಕೆನ್ನುವ ಸಮಯಕ್ಕೆ ಸರಿಯಾಗಿ ಆ ದಾರಿಯಲ್ಲಿ ಏನೋ ಕೆಲಸವಿದ್ದವರಂತೆ ಇವನು ಹೊರಡುತ್ತಿದ್ದ. ಮನೆಯಲ್ಲಿ ಹತ್ತು ವರ್ಷಗಳಿಂದ ಉಪಯೋಗದಲ್ಲಿರುವ ಹಸಿರು ಪ್ಲಾಸ್ಟಿಕ್ ಚರಿಗಿ ಹಿಡಿದು ಅವರ ಬೆನ್ನು ಹತ್ತುತ್ತಿದ್ದ. ಅವನ ಅಜ್ಜಿ ಊರ ಜಾತ್ರೆಯಲ್ಲಿ ಕೊಂಡುಕೊಂಡಿದ್ದ ಈ ಚರಿಗೆಯ ಸ್ವಾಭಾವಿಕ ಹಸಿರು ಬಣ್ಣ ಹೊರಟುಹೋಗಿ ಈಗ ಮತ್ತೊಂದು ತೆರನಾದ ಹಸಿರನ್ನು ಅದು ಪಡೆದಿತ್ತು. ಅದರ ಕಂಟ ಕಿತ್ತುಹೋಗಿ ಅದು ಯಾವಾಗ ಕೈಯಿಂದ ಜಾರಿಹೋಗುವುದೋ ಎನ್ನುವ ಹೆದರಿಕೆಯಲ್ಲಿ ಅದನ್ನು ಬಹಳಷ್ಟು ಚಾಕಚಕ್ಯತೆಯಲ್ಲಿ ಹಿಡಿದುಕೊಳ್ಳಬೇಕಾಗಿತ್ತು.

ಪುಣ್ಯಕ್ಕೆ ಈ ಊರಿನಲ್ಲಿ ಗಂಡಸರು ರಸ್ತೆಯ ಎಡಗಡೆಗೆ ಬೈಲಕಡೆ ಹೋಗುವುದೆಂದೂ ಹೆಂಗಸರು ಬಲಗಡೆ ಹೋಗುವುದೆಂದೂ ಬಲುಹಿಂದೆಯೇ ತೀರ್ಮಾನವಾಗಿತ್ತು. ಮೇಲಾಗಿ ಹೆಣ್ಣುಮಕ್ಕಳ ಮರ್ಯಾದೆಯ ಪ್ರಶ್ನೆಯೆಂದು ಪಂಚಾಯತಿಯವರು ಇತ್ತೀಚೆಗೆ ಮರೆಗೋಡೆ ಬೇರೆ ಕಟ್ಟಿಸಿದ್ದರು. ಮಳೆಗಾಲದ ದಿನಗಳಲ್ಲಿ ರಾಡಿ–ರೊಜ್ಜು ಹಾಗೂ ಹಂದಿಗಳ ಉಪಟಳ ಹೆಚ್ಚಾಯಿತು. ಮೊದಮೊದಲು ಅಂಜಿದಂತಿದ್ದ ಹಂದಿಗಳು ಕ್ರಮೇಣ ಆ ಹೆದರಿಕೆಯನ್ನು ಸದ್ದಿಲ್ಲದೆ ನೀಗಿಕೊಂಡವು. ಹಾಗಾಗಿ ಬಯಲಕಡೆ ಹೋಗಬೇಕೆಂದಾಗ ಹೆಂಗಸರು, ಮಕ್ಕಳು ಬಡಿಗೆಯನ್ನು ಹಿಡಿದುಕೊಂಡು ಹೋಗಬೇಕಾಯಿತು. ಕೆಲವರು ತಾವು ಕೂಡುವ ಹತ್ತಿರ ಸಣ್ಣಸಣ್ಣ ಚೂಪುಗಲ್ಲುಗಳ ಗುಂಪು ಹಾಕಿಟ್ಟುಕೊಂಡಿರುತ್ತಿದ್ದರು. ‘ಗ್ವಾಡಿ ಹಿಂದ ಕುಂತ್ರ ಹಂದಿಗಳ ಕಾಟ, ಗಿಡದ ಮರಿಗೆ ಕುಂತ್ರ ಪುಂಡಲೀಕನ ಕಾಟ.’ ಹೆಂಗಸರ ಶಾಪಗಳು ಚೂಪಾಗಿರುತ್ತಿದ್ದವು. ಹಂದಿಗಳಿಗೆ ಒಗೆಯುವ ಕಲ್ಲುಗಳನ್ನು ಒಮ್ಮೊಮ್ಮೆ ಅವನ ಕಡೆ ಒಗೆಯಲಿಕ್ಕೆ ಸುರು ಮಾಡಿದ ಮೇಲೆ ಅವನು ಆ ಚಾಳಿಯನ್ನು ಬಿಟ್ಟನೆಂದು ಹೇಳುತ್ತಾರೆ. ನೆಟ್ಟ ಬಾಣದಂತಿದ್ದ ಒಂದು ಚೂಪುಗಲ್ಲನ್ನು ಪುಂಡಲೀಕನ ಹಣೆಗೆ ಗುರಿಯಿಟ್ಟು ಒಗೆದು ಕೆಳಗಿನಮನಿ ಕಮಲವ್ವ ಎನ್ನುವ ಹತ್ತನೆಯ ತರಗತಿಯ ಹುಡುಗಿ ತನ್ನ ಪರಾಕ್ರಮ ಮೆರೆದಿದ್ದಳು. ಮರುದಿನ ಮನಸ್ಸು ತಡೆಯದೆ ಹೋದಲ್ಲೆಲ್ಲ ಪುಂಡ್ಯಾ ತನ್ನ ಬೆನ್ನು ಹತ್ತುತಾನೆಂದು ಸಾಂವಕ್ಕ ಟೀಚರ್ ಮುಂದೆ ಹೇಳಿದಳು. ಇಂತಹ ಎರಡು–ಮೂರು ಪ್ರಸಂಗ ನಡೆದದ್ದು ಟೀಚರ್‌ಗೆ ಗೊತ್ತಿತ್ತು. ಆಕೆ ಕಮಲಾಳನ್ನು ಹೆಡ್‌ಮಾಸ್ತರ್ ಹತ್ತಿರ ಕರೆದುಕೊಂಡು ಹೋದಳು.

ಶಾಲೆ ಬಿಟ್ಟ ಮೇಲೆ ಎಲ್ಲ ಮಾಸ್ತರ್‌ಗಳು ಸೇರಿ ಪುಂಡಲೀಕನನ್ನು ದೊಡ್ಡ ಕ್ಲಾಸ್ ರೂಮಿಗೆ ಒಯ್ದು ನಾದತೊಡಗಿದರು. ರೂಲ್ ಕಟ್ಟಿಗೆಯಿಂದ ಮನಬಂದಂತೆ ಬಡಿದರು. ಮೂಲೆಗೆ ಹಾಕಿ ಒದ್ದರು. ಅವನಿಗೆ ಆ ರೀತಿ ಹೊಡೆಯುವುದನ್ನು ನೋಡಿ ಕಮಲಾ ತಾನು ಯಾಕಾದರೂ ಇದನ್ನು ಮಾಸ್ತರರ ಮುಂದೆ ಹೇಳಿದೆನೋ ಎಂದು ಅನಿಸತೊಡಗಿತು. ಆದರೂ ಅವನಿಗೆ ಬುದ್ಧಿ ಬಂದದ್ದು ಒಳ್ಳೆಯದಾಯಿತೆಂದು ಸಂತಸಗೊಂಡಳು.

ಮಗ ಎಷ್ಟು ದೊಡ್ಡವನಾದರೂ ತಾಯಿಗೆ ಕೂಸೇ. ಅವನ ಗೆಳೆಯರು ಯಾವುದ್ಯಾವುದೋ ಉದ್ಯೋಗಗಳಿಗೆ ಹತ್ತಿದರು. ಕೆಲವರು ದೊಡ್ಡ ದೊಡ್ಡ ಊರುಗಳಲ್ಲಿ ಇನ್ನೂ ಕಲಿಯುತ್ತಿದ್ದರು. ಪಿ.ಯು.ಸಿ ಫೇಲಾಗಿದ್ದ ಪುಂಡ ಊರಲ್ಲಿ ರಿಕಾಮಿಯಾಗಿ ತಿರುಗುತ್ತಿದ್ದ. ಒಮ್ಮೊಮ್ಮೆ ಆತ ತುಂಬ ಒಳ್ಳೆಯವನಾಗಿ ಕಂಡುಬರುತ್ತಿದ್ದ. ವಿನಂತಿ ಮಾಡಿದರೆ ಬೇಕಾದಷ್ಟು ಕೆಲಸ ಮಾಡುತ್ತಿದ್ದ. ಆದರೆ ಅವನ ತಲೆ ತಿರುಗಿತೋ, ಕೆಲಸವನ್ನು ಅರ್ಧಕ್ಕೆ ಬಿಟ್ಟು ಗುಡಿ–ಗುಂಡಾರಕ್ಕೋ, ಊರಾಚೆಯ ಮಠಕ್ಕೋ ಹೋಗುತ್ತಿದ್ದ. ಮಠದಲ್ಲಿ ಸ್ವಾಮೀಜಿಯ ಕೆಲಸಗಳನ್ನು ಚಾಚೂ ತಪ್ಪದೆ ಮಾಡುತ್ತಿದ್ದ. ‘ಪುಂಡಲೀಕನಂತಹ ಒಳ್ಳೆಯ ಕೆಲಸಗಾರ ಯಾರೂ ಸಿಗಲಿಕ್ಕಿಲ್ಲ.’ ಮಠದ ಅಜ್ಜನವರು ಫರ್ಮಾನು ಹೊರಡಿಸಿದರೆ ಮುಗಿಯಿತಲ್ಲ! ಆತನಿಗೆ ಮುಂದೆ ಕಲಿಯಲು ಸ್ವಾಮಿಗಳೇ ಸಹಾಯ ಮಾಡಿದರಂತೆ. ಅವರೆ ತಮಗೆ ಗೊತ್ತಿದ್ದ ಮಠವೊಂದರಲ್ಲಿ ಇರಿಸಿದರು. ತಾವು ಆಗಾಗ ಅಲ್ಲಿಗೆ ಹೋಗುತ್ತಿದ್ದರು. ಇವನನ್ನೇ ಮಠದ ಮರಿ ಮಾಡುತ್ತಾರೇನೋ ಎನ್ನುವಷ್ಟರ ಮಟ್ಟಿಗೆ ಅವರು ಅವನನ್ನು ಹಚ್ಚಿಕೊಂಡಿದ್ದರು. ಅಷ್ಟೇನೂ ಬುದ್ಧಿವಂತನಲ್ಲದ ಯಃಕಶ್ಚಿತ್ ಒಬ್ಬ ಸಾದಾ ತರುಣನನ್ನು ಶಾಖಾ ಮಠದ ಸ್ವಾಮಿಗಳು ಇಷ್ಟು ಆತ್ಮೀಯವಾಗಿ ಕಾಣುತ್ತಿರುವುದಕ್ಕೆ ಮೂಲ ಮಠದ ಹಿರಿಯ ಸ್ವಾಮಿಗಳು ಹುಬ್ಬೇರಿಸಿದ್ದೂ ಉಂಟು. ಅವನಿಗೆ ಅಲ್ಲಿಯೇ ಒಂದು ಕಡೆ ಮಾಸ್ತರ್ ನೌಕರಿ ದೊರೆಯಿತು. ಆದರೂ ಮಠದೊಂದಿಗಿನ ಅವನ ಬಾಂಧವ್ಯ ಮುಂದುವರೆದಿತ್ತು. ತಮ್ಮ ಊರಿನ ಸ್ವಾಮಿಗಳು ಈ ಮಠಕ್ಕೆ ಬಂದರೆ ಆತ ಬಂದು ಅವರ ಪೂಜೆ–ಪುನಸ್ಕಾರಕ್ಕೆ ತಯಾರು ಮಾಡುತ್ತಿದ್ದ. ಎರಡು ಮೂರು ದಿನ ಅವರನ್ನು ಬಿಟ್ಟು ಕದಲುತ್ತಿರಲಿಲ್ಲ. ಅವನಲ್ಲಿಯ ವಿನಯ–ಶ್ರದ್ಧೆ ಕಂಡು ಇತರರು ಸಹ ‘ಪುಂಡಲೀಕ ಬಾಳ ನಿಷ್ಠಾವಂತ’ ಎಂದು ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು.

ನಾಲ್ಕೈದು ತಿಂಗಳು ಕಳೆದಿರಬೇಕು. ಮುಂದೆ ಏಕಾಏಕಿ ಒಂದು ದಿನ ಸ್ವಾಮಿಗಳು ಸಿಟ್ಟಿನಲ್ಲಿ ಬಂದರು. ತಮ್ಮ ಸಹಾಯಕ್ಕೆ ಇದೇ ಮಠದಲ್ಲಿದ್ದ ಬೇರೊಬ್ಬ ಹುಡುಗನನ್ನು ಕರೆದುಕೊಂಡರು. ಪುಂಡಲೀಕನಿಗೆ ಸೊಕ್ಕು ಬಂದಿದೆಯೆಂದೂ ಅವನಿಗೆ ನೌಕರಿ ಕೊಡಿಸಿದ್ದೇ ತಪ್ಪಾಯಿತೆಂದೂ ಹೇಳಿ ಆ ದುಷ್ಟನನ್ನು ಹಚ್ಚಿಕೊಳ್ಳಬಾರದಿತ್ತೆಂದು ತಮ್ಮ ದುಃಖ ತೋಡಿಕೊಂಡರು. ಹಿರಿಯ ಸ್ವಾಮಿಗಳು ಸಮಾಧಾನ ಹೇಳಿದ ಮೇಲೆ ಇವರಿಗೆ ನೆಮ್ಮದಿಯೆನಿಸಿತು. ಮಠದ ಸುದ್ದಿ ಹೊರಹೋಗದಿದ್ದುದಕ್ಕೆ ಖುಷಿಯೆನಿಸಿತು. ಆ ಪುಂಡಲೀಕ ಮತ್ತೆ ಮಠದೊಳಗೆ ಕಾಲಿಟ್ಟರೆ ಅವನ ಕಾಲುಗಣಿಕೆಯನ್ನೇ ತೆಗೆಯಬೇಕೆಂದು ಹಿರಿಯ ಸ್ವಾಮಿಗಳೇ ಈಗ ಅಪ್ಪಣೆಯಿತ್ತರು.

* * *

ಮಠದಲ್ಲಿದ್ದ ಭೋಗಯೋಗ ತಪ್ಪಿತೋ ಇಲ್ಲಾ ಊರಿನ ನೆನಪಾಯಿತೋ ಅಂತೂ ಪುಂಡಲೀಕ ತನ್ನ ಊರಿಗೆ ವರ್ಗವಾಗಿ ಬಂದ. ಐದಾರು ತಿಂಗಳು ಅವನ ದೆಸೆಯಿಂದ ಯಾವ ಹೊಸ ಸುದ್ದಿಯೂ ಬಂದಿರಲಿಲ್ಲ. ಓಹೋ! ಈತ ಮೊದಲಿನ ಪುಂಡಲೀಕನಲ್ಲ, ದೊಡ್ಡವನಾಗಿ ಪುಂಡಲೀಕಪ್ಪನಾಗಿದ್ದಾನೆ. ಮಾಸ್ತರನಾಗಿ ಜವಾಬ್ದಾರಿ ಬಂದಿದೆ. ಅವನ ಹಳೆಯ ಪರಾಕ್ರಮಗಳನ್ನು ಬಹುಶಃ ಯಾರೂ ನೆನಪು ಮಾಡಿಕೊಳ್ಳಲೂ ತಯಾರಿರಲಿಲ್ಲ.

ಇತ್ತೀಚೆಗೆ ಪ್ರತಿಯೊಬ್ಬ ಹುಡುಗನು ನಾಲಿಗೆಯನ್ನು ಮೂಗಿಗೆ ಮುಟ್ಟಿಸುವ ಕಾಯಕ